4) ದಕ್ಷಿಣ ಕನ್ನಡ ಸ.ಸ.ಕಾ, ಬ್ರಹ್ಮಾವರ
5) ರಾಯಬಾಗ್ ಸ.ಸ.ಕಾ, ರಾಯಬಾಗ್
6) ಶ್ರೀ ಭಾಗ್ಯಲಕ್ಷ್ಮಿ ಸ.ಸ.ಕಾ, ಖಾನಾಪುರ
7) ಆಳಂದ ಸ.ಸ.ಕಾ, ಭೂಸನೂರು
8) ಪಾಂಡವಪುರ ಸ.ಸ.ಕಾ, ಪಾಂಡವಪುರ

ಇವುಗಳಲ್ಲದೆ ಆರ್ಥಿಕ ಸಂಕಷ್ಟದಿಂದ ಸ್ಥಗಿತಗೊಂಡಿರುವ ವಾಣಿವಿಲಾಸ ಸ.ಸ.ಕಾ ಮತ್ತು ಭದ್ರಾ ಸ.ಸ.ಕಾಗಳನ್ನು ದೀರ್ಘಾವಧಿಯ ಮೇಲೆ ಖಾಸಗಿಯವರಿಗೆ ಗುತ್ತಿಗೆಗೆ ನೀಡಲು ಉದ್ದೇಶಿಸಲಾಗಿದೆ.

ಇ) ಬೇರೆ ಬೆಳೆಗಳಿಗೆ ಸಿಗುವ ದರ ಕಬ್ಬಿಗಿಂತ ಲಾಭದಾಯಕವಿದ್ದಾಗ ಕಬ್ಬು ಬೆಳೆಯುವುದು ಕಡಿಮೆಯಾಗುತ್ತದೆ ಹಾಗೂ ಕಬ್ಬಿಗೆ ಬೆಲೆ ಜಾಸ್ತಿಯಿದ್ದಾಗ ಅದನ್ನು ಬೆಳೆಯುವುದು ಜಾಸ್ತಿಯಾಗುತ್ತದೆ. ಆದ್ದರಿಂದ ಕಬ್ಬಿನ ಬೆಲೆಯಲ್ಲಿನ ಏರಿಳಿತವು ಕಬ್ಬು ಉತ್ಪಾದನಾ ಪ್ರಮಾಣದ ಮೇಲೆ ಪರಿಣಾಮ ಬೀರುತ್ತದೆ. ಕಬ್ಬಿನ ಕೊರತೆಯಿದ್ದಾಗ ಸಕ್ಕರೆ ಕಾರ್ಖಾನೆಗಳು ಹೆಚ್ಚುವರಿ ದರ ನೀಡಿ ಕಬ್ಬು ಖರೀದಿಸುತ್ತಾರೆ. ಬೇರೆ ಬೆಳೆಗಳಿಗಿಂತ ಕಬ್ಬಿಗೆ ದರ ಜಾಸ್ತಿ ಸಿಗುವುದೆಂದು ತಿಳಿದು ಎಲ್ಲರೂ ನಂತರದ ಹಂಗಾಮಿಗೆ ಕಬ್ಬನ್ನು ಜಾಸ್ತಿ ಬೆಳೆಯುತ್ತಾರೆ. ಅಗತ್ಯಕ್ಕಿಂತ ಹೆಚ್ಚಿಗೆ ಕಬ್ಬು ಬೆಳೆದಾಗ ಸಹಜವಾಗಿ ಅದಕ್ಕೆ ದರ ಕಡಿಮೆಯಾಗಿ ರೈತರು ನಷ್ಟ ಅನುಭವಿಸುತ್ತಾರೆ. ಇದರಿಂದ ನಂತರದ ಹಂಗಾಮುಗಳಲ್ಲಿ ಕಬ್ಬು ನಾಟಿ ಕಡಿಮೆ ಮಾಡುತ್ತಾರೆ. ಹಾಗೂ ಬೇರೆ ಲಾಭದಾಯಕ ಬೆಳೆಗಳಿಗೆ ಹೋಗುತ್ತರೆ. ಇದರಿಂದ ಕಬ್ಬಿನ ಉತ್ಪಾದನೆ ಕಡಿಮೆಯಾಗುತ್ತದೆ. ಪುನಃ ಕಬ್ಬಿಗೆ ಬೇಡಿಕೆ ಹೆಚ್ಚಾಗಿ ದರ ಏರಿಕೆಯಾಗುತ್ತದೆ. ಇದು ಪ್ರತಿ 4–5 ವರ್ಷಗಳ ಅವಧಿಯಲ್ಲಿ ಪುನರಾವರ್ತನೆಯಾಗುತ್ತದೆ.

ಎ.ಪಿ.ಎಲ್. ಕಾರ್ಡುದಾರರಿಗೆ ಪಡಿತರ ಅಕ್ಕಿ ವಿತರಣೆ

1522 ಶ್ರೀ ಹ್ಯಾರಿಸ್ ಎನ್.ಎ. (ಶಾಂತಿನಗರ) : ಮಾನ್ಯ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಎ.ಪಿ.ಎಲ್. ಕಾರ್ಡುದಾರರಿಗೆ ಯಾವರೀತಿ ಪಡಿತರ ಅಕ್ಕಿ ವಿತರಿಸಲಾಗುತ್ತಿದೆ;

(ವಿವರ ನೀಡುವುದು);

ಆ) ಈ ಸೌಲಭ್ಯವನ್ನು ಎಷ್ಟು ಅನೌಪಚಾರಿಕ ಪಡಿತರ ಕೇಂದ್ರಗಳಿಗೆ ವಿಸ್ತರಿಸಲಾಗಿದೆ;

ರಾಜ್ಯಾದ್ಯಂತ ಈ ಸೌಲಭ್ಯವನ್ನು ಒದಗಿಸಿಕೊಡಲು ಸರ್ಕಾರದ ಕ್ರಮಗಳೇನು;

ಇ) ಕೇಂದ್ರ ಸರ್ಕಾರವು ಎಷ್ಟು ಪ್ರಮಾಣದ ಅಕ್ಕಿಯನ್ನು ಎ.ಪಿ.ಎಲ್. ಕಾರ್ಡುದಾರರಿಗೆ ವಿತರಿಸಲು ಮಂಜೂರು ಮಾಡಿದೆ;

ಈ) ಎಪಿಎಲ್ ಕಾರ್ಡುದಾರರಲ್ಲದೆ ಇರುವವರಿಗೂ ಅಕ್ಕಿ ವಿತರಿಸುವ ದಿಶೆಯಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಹೆಚ್. ಹಾಲಪ್ಪ (ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು) :

ಅ) ರಾಜ್ಯದಲ್ಲಿ ಎಪಿಎಲ್ ಕಾರ್ಡುದಾರರಿಗೆ ಯಾವುದೇ ರೀತಿಯ ಪಡಿತರ ಅಕ್ಕಿ ವಿತರಿಸಲಾಗುತ್ತಿಲ್ಲ.

ಆದರೆ ಪ್ರಸ್ತುತ ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಹೆಚ್ಚುವರಿಯಾಗಿ ಅಕ್ಕಿ ಮತ್ತು ಗೋಧಿಯು ಜನವರಿ ಮತ್ತು ಫೆಬ್ರವರಿ 2010ರ ಮಾಹೆಗೆ ಬಿಡುಗಡೆಯಾಗಿದ್ದು, ಸದರಿ ಅಕ್ಕಿ ಮತ್ತು ಗೋಧಿಯನ್ನು ಫೆಬ್ರವರಿ 2010ರ ಮಾಹೆಗೆ ರಾಜ್ಯದ ಎಲ್ಲಾ ಜಿಲ್ಲೆಗಳ ಅನೌಪಚಾರಿಕ ಪಡಿತರ ಪ್ರದೇಶದ ಎಪಿಎಲ್ ಪಡಿತರ ಚೀಟಿದಾರರಿಗೆ ಪಡಿತರ ಚೀಟಿ ಒಂದಕ್ಕೆ 10 ಕೆಜಿ ಅಕ್ಕಿ ಮತ್ತು 5 ಕೆಜಿ ಗೋಧಿ ವಿತರಿಸಲು ತೀರ್ಮಾನಿಸಿ ಜಿಲ್ಲಾವಾರು ಹಂಚಿಕೆ ಮಾಡಲಾಗಿದೆ. ಸದರಿ ಅಕ್ಕಿ ಮತ್ತು ಗೋಧಿಯ ದರವು ಜಿಲ್ಲೆಯಿಂದ ಜಿಲ್ಲೆಗೆ ಬದಲಾವಣೆ ಆಗುತ್ತಿದ್ದು, ಅಕ್ಕಿಯ ದರ ಕನಿಷ್ಟ ರೂ.16.15 ರಿಂದ ಗರಿಷ್ಟ ರೂ.16.40ರ ವರೆಗೆ ಹಾಗೂ ಗೋಧಿಯ ಕನಿಷ್ಟ ದರವು 11.45 ರಿಂದ ಗರಿಷ್ಟ ರೂ.11.70 ರ ವರೆಗೆ ನಿಗಧಿಪಡಿಸಲಾಗಿದೆ.

ಆ) ಬೆಂಗಳೂರು ಅನೌಪಚಾರಿಕ ಪಡಿತರ ಸೇರಿದಂತೆ ಒಟ್ಟು 28 ಜಿಲ್ಲೆಗಳ ಅನೌಪಚಾರಿಕ ಪಡಿತರ ಪ್ರದೇಶಗಳಿಗೆ (ಬೆಂಗಳೂರ ನಗರ ಮತ್ತು ಕೊಡಗು ಜಿಲ್ಲೆಯನ್ನು ಹೊರತುಪಡಿಸಿ) ವಿಸ್ತರಿಸಲಾಗಿದೆ.

ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಹೆಚ್ಚುವರಿಯಾಗಿ ಬಿಡುಗಡೆಯಾದ ಅಕ್ಕಿ ಮತ್ತು ಗೋಧಿಯನ್ನು ರಾಜ್ಯದ ಜಿಲ್ಲೆಗಳ ಅನೌಪಚಾರಕ ಪಡಿತರ ಪ್ರದೇಶದ ಎಪಿಎಲ್ ಪಡಿತರ ಚೀಟಿದಾರರಿಗೆ ವಿತರಿಸಲು ತೀರ್ಮಾನಿಸಿ ಒಟ್ಟು 28 ಜಿಲ್ಲೆಗಳಲ್ಲಿರುವ ಅನೌಪಚಾರಿಕ ಪಡಿತರ ಪ್ರದೇಶದ ಎಪಿಎಲ್

ಪಡಿತರ ಚೀಟಿಗಳನ್ನು ಲೆಕ್ಕ ಹಾಕಿ ಪಡಿತರ ಚೀಟಿ ಒಂದಕ್ಕೆ 10 ಕೆಜಿ ಅಕ್ಕಿ ಮತ್ತು 5 ಕೆಜಿ ಗೋಧಿ ವಿತರಿಸಲು ಒಟ್ಟು 14,056 ಮೆ.ಟನ್ ಅಕ್ಕಿ ಮತ್ತು 7.036 ಮೆ.ಟನ್ ಗೋಧಿಯನ್ನು ದಿ:02–02–2010ರ ಅಧಿಕೃತ ಜ್ಞಾಪನದಲ್ಲಿ ಬಿಡುಗಡೆಗೊಳಿಸಲಾಗಿದೆ. ಸದರಿ ಆಹಾರಧಾನ್ಯಗಳನ್ನು ಭಾರತ ಆಹಾರ ನಿಗಮದಿಂದ ಹಣ ಪಾವತಿಸಿ ಎತ್ತುವಳಿ ಮಾಡಲು ಕೇಂದ್ರ ಸರ್ಕಾರವು ದಿ: 31–03–2010ರ ವರೆಗೆ ದಿನಾಂಕವನ್ನು ನಿಗಧಿಪಡಿಸಿದೆ.

ಸದರಿ ಆಹಾರಧಾನ್ಯಗಳ ವಿತರಣೆ ಬಗ್ಗೆ ಜಿಲ್ಲೆಗಳಿಂದ ಹೆಚ್ಚಿನ ಬೇಡಿಕೆಯು ಬಂದಿರುವುದಿಲ್ಲ. ಹಂಚಿಕೆ ನೀಡಲಾದ ಅಕ್ಕಿ ಮತ್ತು ಗೋಧಿಯಲ್ಲಿ 3,484 ಮೆ.ಟನ್ ಅಕ್ಕಿ ಮತ್ತು 1855 ಮೆ.ಟನ್, ಗೋಧಿ ಎತ್ತುವಳಿ ಆಗಿದೆ. ಸದರಿ ಆಹಾರಧಾನ್ಯಗಳಿಗೆ ಹೆಚ್ಚಿನ ಬೇಡಿಕೆ ಇಲ್ಲದೆ ಇರುವುದರಿಂದ ಸದರಿ ಯೋಜನೆಯನ್ನು ಪಟ್ಟಣ ಮತ್ತು ಗ್ರಾಮಾಂತರ ಪ್ರದೇಶಕ್ಕೆ ವಿಸ್ತರಿಸಿರುವುದಿಲ್ಲ. ಪ್ರಸ್ತುತ ಯೋಜನೆ ಮಾರ್ಚ್ 2010ರ ಅಂತ್ಯಕ್ಕೆ ಮುಗಿಯುವುದರಿಂದ, ನಂತರ ಈ ಯೋಜನೆಯನ್ನು ಜಾರಿಗೊಳಿಸಲು ಸಾಧ್ಯವಿರುವುದಿಲ್ಲ.

ಇ) ಕೇಂದ್ರ ಸರ್ಕಾರವು 86, 266 ಮೆ.ಟನ್. ಅಕ್ಕಿ ಮತ್ತು 8,104 ಮೆ.ಟನ್ ಗೋಧಿಯನ್ನು ಹೆಚ್ಚುವರಿಯಾಗಿ ಎಲ್ಲಾ ವಿಧದ ಪಡಿತರ ಚೀಟಿಗಳಿಗೆ ವಿತರಿಸಲು ಜನವರಿ ಮತ್ತು ಫೆಬ್ರವರಿ 2010ರ ಮಾಹೆಗೆ ಬಿಡುಗಡೆಗೊಳಿಸಿರುತ್ತಾರೆ.

ಇ) ಕೇಂದ್ರ ಸರ್ಕಾರದ ಮುಕ್ತ ಮಾರುಕಟ್ಟೆ ಅಕ್ಕಿ ವಿತರಣಾ ಯೋಜನೆಯಡಿಯಲ್ಲಿ ರಾಜ್ಯಕ್ಕೆ ಬಿಡುಗಡೆಯಾದ ಅಕ್ಕಿಯನ್ನು ಪಡಿತರ ಚೀಟಿ ಇಲ್ಲದೆ ಇರುವವರಿಗೂ ಲಭ್ಯವಾಗುವಂತೆ ಬೆಂಗಳೂರು, ಚಾಮರಾಜನಗರ, ಚಿತ್ರದುರ್ಗ, ಧಾರವಾಡ, ಮಂಡ್ಯ, ತುಮಕೂರು ಹಾಗೂ ಬಿಜಾಪುರ ಜಿಲ್ಲೆಗಳಲ್ಲಿರುವ ಜನತಾ ಬಜಾರ್ ಮೂಲಕ ಯಾವುದಾದರೊಂದು ಅಧಿಕೃತ ಗುರುತಿನ ಚೀಟಿಯನ್ನು ಆಧರಿಸಿ ತಲಾ 25 ಕೆ.ಜಿ ಅಕ್ಕಿ ಮತ್ತು 25 ಕೆ.ಜಿ. ಗೋಧಿಯನ್ನು ಹಂಚಿಕೆ ಮಾಡಲು ವ್ಯವಸ್ಥೆ ಮಾಡಲಾಗಿದೆ. ಸದರಿ ಅಕ್ಕಿ ಮತ್ತು ಗೋಧಿಯ ದರವು ಕೆ.ಜಿ. ಒಂದರ ರೂ.17.00 ಹಾಗೂ ರೂ.14.65 ಆಗಿರುತ್ತದೆ.

ಗ್ರಾಹಕರಿಗೆ ಕಡಿಮೆ ಬೆಲೆಯಲ್ಲಿ ಅಕ್ಕಿ ವಿತರಿಸುವ ಉದ್ದೇಶದಿಂದ ಅಕ್ಕಿ ಸಂತೆಯನ್ನು ದಿ: 21–08–2009 ರಿಂದ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಕರ್ನಾಟಕ ರಾಜ್ಯ

ಗ್ರಾಹಕರ ಸಹಕರ ಮಹಾಮಂಡಳಿ ನಿಯಮಿತ ಹಾಗೂ ಅಕ್ಕಿ ಗಿರಣಿ ಮಾಲೀಕರ ಸಹಯೋಗದೊಂದಿಗೆ ಕಾರ್ಯಕ್ರಮವನ್ನು ಹಮ್ಮಿಕೊಂಡು, ಅಕ್ಕಿ ಗಿರಣಿ ಮಾಲೀಕರು ನೇರವಾಗಿ ಜನತಾ ಬಜಾರ್‌ಗಳಿಗೆ ಸರಬರಾಜು ಮಾಡಿ ಮಧ್ಯವರ್ತಿಗಳ ಹಾವಳಿ ಇಲ್ಲದೆ ಸಾರ್ವಜನಿಕರ ಕಡಿಮೆ ದರದಲ್ಲಿ ಅಕ್ಕಿಯು ದೊರೆಯುವಂತೆ, ಬೆಂಗಳೂರಿನ 7 ಜನತಾ ಬಜಾರ್ ಮೂಲಕ ಅಕ್ಕಿಯನ್ನು ಮಾರಾಟ ಮಾಡಲಾಯಿತು. ಸದರಿ ಯೋಜನೆಯಲ್ಲಿ 359.6 ಮೆ.ಟನ್. ಅಕ್ಕಿಯನ್ನು ಗ್ರಾಹಕರಿಗೆ ದಿ: 24–10–2009ರ ವರೆಗೆ ವಿತರಿಸಲಾಗಿದೆ.

ರೈತರ ಸಂತೆ ಯೋಜನೆಯ ಅನುಷ್ಠಾನ

985 (1523) ಶ್ರೀ ಹ್ಯಾರಿಸ್ ಎನ್ ಎ (ಶಾಂತಿ ನಗರ) : ಮಾನ್ಯ ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ಕಡೆಗಳಲ್ಲಿ ರೈತರ ಸಂತೆಯ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗಿದೆ?

ಆ) ಕಳೆದ 2 ವರ್ಷಗಳಲ್ಲಿ ನಬಾರ್ಡ್ ಯೋಜನೆಯ ಮೂಲಕ ಪಡೆಯಲಾದ ಅನುದಾನದ ಮೊತ್ತ ಎಷ್ಟು?

ಇ) ವಿವಿಧ ಯೋಜನೆಗಳ ಜಾರಿಗಾಗಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳಿಂದ ಪಡೆದ ಹಾಗೂ ವೆಚ್ಚ ಮಾಡಿದ ಅನುದಾನಗಳ ವಿವರಗಳೇನು?

ಶ್ರೀ ಶಿವರಾಜ್ ಎಸ್. ತಂಗಡಗಿ (ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು) :

ಅ) ರಾಜ್ಯದಲ್ಲಿ ಒಟ್ಟು 14 ಕಡೆಗಳಲ್ಲಿ ರೈತರ ಸಂತೆಯ ಕಾರ್ಯಕ್ರಮಗಳನ್ನು ಅನುಷ್ಠಾನ ಗೊಳಿಸಲಾಗಿದೆ. ವಿವರಗಳನ್ನು ಅನುಬಂಧ–1 ರಲ್ಲಿ ಲಗತ್ತಿಸಿದೆ.

ಆ) ಅನುಬಂಧ–2 ರಲ್ಲಿ ಲಗತ್ತಿಸಿದೆ.

ಇ) ಅನುಬಂಧ–3 ರಲ್ಲಿ ಲಗತ್ತಿಸಿದೆ.